ಮೊದಲ ರಾತ್ರಿಯ ಬೀಭತ್ಸ ದೃಶ್ಯವನ್ನು ಕಲ್ಪಿಸಿಕೊಂಡು, ಅಂಜುತ್ತಾ, ಅಳುಕುತ್ತಾ ನಡುಗುತ್ತಲೇ ಮಲಗುವ ಕೋಣೆಯನ್ನು ಪ್ರವೇಶಿಸಿದ ರಾಜಕುಮಾರನು ಮಿಂಚು ಹೊಡೆಸಿಕೊಂಡವನಂತೆ ನಿಂತುಬಿಟ್ಟಿದ್ದ!

ಸ್ವರ್ಗಲೋಕದಿಂದ ಇಳಿದು ಬಂದಂತಿರುವ ಅತ್ಯಂತ ಸುಂದರಿಯೊಬ್ಬಳು ಮುಗುಳುನಗುತ್ತಾ ಮಂಚದ ಮೇಲೆ ಕುಳಿತಿದ್ದಾಳೆ!

'ಇದು ಹೇಗೆ ಸಾಧ್ಯವಾಯಿತು!!?' ರಾಜಕುಮಾರ ಗಾಬರಿಯಿಂದ ಉದ್ಗರಿಸಿದ್ದ.

'ಗೆಳೆಯನನ್ನು ರಕ್ಷಿಸಲು ನನ್ನಂತಹ ಅಸಹ್ಯ ರೂಪದ ಮಾಟಗಾತಿಯನ್ನು ಮದುವೆಯಾಗಲು ಸಿದ್ಧರಾದ ನಿಮ್ಮನ್ನು ಗೌರವಿಸುವ ಸಲುವಾಗಿ, ದಿನವೊಂದರ ಅರ್ಧ ಭಾಗದಲ್ಲಿ ಸುಂದರಿಯಾಗಿಯೂ, ಉಳಿದರ್ಧ ಭಾಗದಲ್ಲಿ ಕುರೂಪಿಯಾಗಿಯೂ ಬದಲಾಗಲು ನಾನು ನಿರ್ಧರಿಸಿರುತ್ತೇನೆ' ಎಂದು ಮಾಟವಾಗಿ ನಗುತ್ತಾಳೆ. ಮಾತ್ರವಲ್ಲ, 'ಯಾವ ಹೊತ್ತಿನಲ್ಲಿ ಯಾವ ರೂಪದಲ್ಲಿ ನಾನಿರಬೇಕು ಎಂಬ ಆಯ್ಕೆಯನ್ನು ನಿಮಗೆ ಬಿಟ್ಟಿರುವೆ' ಎಂದೂ ಹೇಳುತ್ತಾಳೆ!

ರಾಜಕುಮಾರನಿಗೆ ಉಭಯಸಂಕಟ.

ಅತ್ಯಂತ ಸುಂದರಿಯೊಬ್ಬಳ ಜೊತೆಗೆ ಹಗಲು ಹೊತ್ತಲ್ಲಿ ಜಂಭದಿಂದ ಎಲ್ಲರೆದುರು ಓಡಾಡುವುದನ್ನು ಆರಿಸಿಕೊಂಡರೆ, ರಾತ್ರಿಯ ಏಕಾಂತದಲ್ಲಿ ವಿಕಾರರೂಪಿಯ ಜೊತೆಗೆ ಏಗಬೇಕಾಗುತ್ತದೆ. ರಾತ್ರಿ ಹೊತ್ತಲ್ಲಿ ಸ್ವರ್ಗಸುಂದರಿಯ ಜೊತೆಗೆ ವಿಹರಿಸಲು ಬಯಸಿದರೆ, ಹಗಲು ಹೊತ್ತಲ್ಲಿ ಗೆಳೆಯರ ಎದುರು ಅವಮಾನಿತನಾಗಬೇಕಾಗುತ್ತದೆ.

ಯಾವುದನ್ನು ಆಯ್ಕೆ ಮಾಡುವುದು ಎಂಬುದನ್ನು ನಿರ್ಧರಿಸಲಾಗದ ರಾಜಕುಮಾರನು, 'ಆಯ್ಕೆ ನಿನ್ನದು' ಎಂದುಬಿಡುತ್ತಾನೆ.

ಆಗ,

ಬೆಳದಿಂಗಳಂತೆ ನಗು ಚೆಲ್ಲಿದ ಅವಳು ಮಂಚದಿಂದ ಎದ್ದು ರಾಜಕುಮಾರನತ್ತ ಹೆಜ್ಜೆಯಿರಿಸುತ್ತಾಳೆ.

'ಬದುಕಿನ ಪ್ರಮುಖ ಘಟ್ಟವೊಂದರಲ್ಲೂ, ಆಯ್ಕೆಯ ಹಕ್ಕನ್ನು ಹೆಂಡತಿಗೆ ಬಿಟ್ಟುಕೊಟ್ಟ ನಿಮ್ಮ ಹೃದಯವಂತಿಕೆಗೆ ಮನಸೋತಿರುವ ನಾನು, ಹಗಲಲ್ಲೂ ರಾತ್ರಿಯಲ್ಲೂ ಹೀಗೆಯೇ ಸುಂದರಿಯಾಗಿಯೇ ಇರಲು ನಿರ್ಧರಿಸಿರುವೆ' ಎನ್ನುತ್ತಾ ಹಾಲಿನ ಬಟ್ಟಲು ಎತ್ತಿಕೊಳ್ಳುತ್ತಾಳೆ.

**(ವರ್ಷದ ಹಿಂದೆ, ಅಮೆರಿಕದ 'ಸಂಟಕ್ಲಾರಾ'ದ ಸುಂದರಿಯೊಬ್ಬಳು, ಬೇರೇನೋ ಮಾತಿನ ನಡುವೆ ಹೇಳಿದ ಸಂಗತಿಯೊಂದರ ಮುತ್ತುಪ್ಪಾಡಿ ಕಥಾರೂಪ)**

---

## ಬೊಳುವಾರು ಮಹಮದ್ ಕುಂಞಿ

ಕನ್ನಡದ ವಿಶಿಷ್ಟ ಕತೆಗಾರ ಬೊಳುವಾರು ಮಹಮದ್ ಕುಂಞಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಬೊಳುವಾರುನವರು. 'ಅತ್ತ, ಇತ್ತಗಳ ಸುತ್ತಮುತ್ತ', 'ದೇವರುಗಳ ರಾಜ್ಯದಲ್ಲಿ', 'ಅಂಕ', 'ಆಕಾಶಕ್ಕೆ ನೀಲಿ ಪರದೆ', 'ಒಂದು ತುಂಡು ಗೋಡೆ', ಅವರ ಕಥಾಸಂಗ್ರಹಗಳು. 'ತಟ್ಟು ಚಪ್ಪಾಳೆ ಪುಟ್ಟ ಮಗು' ಅವರು ಸಂಪಾದಿಸಿದ ಮಕ್ಕಳ ಪದ್ಯಗಳ ಸಂಕಲನ. 'ಜಿಹಾದ್', 'ಸ್ವಾತಂತ್ರ್ಯದ ಓಟ', 'ಓದಿರಿ' ಅವರ ಕಾದಂಬರಿಗಳು. ಬ್ಯಾಂಕ್ ಉದ್ಯೋಗಿಯಾಗಿ ನಾಲ್ಕು ದಶಕ ಕೆಲಸ ಮಾಡಿ ನಿವೃತ್ತರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.